ಸಾರ್ಟ್‌ಔಟ್ ಮಾಡಿ ಬೇಗ ಆ ಕೆಲಸ ಆಗುವ ರೀತಿಯಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಬಹಳ ಸಂತೋಷ. ವಿವರವಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ವರ್ಷಕ್ಕೆ ೨೫೦ ರೂಪಾಯಿ ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡುತ್ತಿದ್ದೀರಿ, ಅದನ್ನು ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಒಂದು ವ್ಯವಸ್ಥೆಯಾಗಬೇಕು. ಕನ್ನಡ ಪತ್ರಿಕೆಗಳ ಬೆಳವಣಿಗೆ ಆಗಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಣ್ಣ ಪತ್ರಿಕೆಗಳಿಗೆ ೨೫೦ ರೂಪಾಯಿ ಇದ್ದುದನ್ನು ಜಾಸ್ತಿ ಮಾಡುತ್ತೇನೆ, ಎಷ್ಟು ಎಂದು ತಮ್ಮ ಬಳಿ ಸಮಾಲೋಚನೆ ಮಾಡಿ ಮಾಡುತ್ತೇನೆ. ಆಮೇಲೆ ಮುಖ್ಯವಾಗಿ ಹೆಗ್ಗಡದೇವನಕೋಟೆ ಮತ್ತಿಂತಹ ಪ್ರದೇಶದಲ್ಲಿ ಜೇನುಕುರುಬರು ಮತ್ತು ಕಾಡು ಕುರುಬ ಜನಾಂಗ ಇದೆ. ಅವರ ಪರಿಸ್ಥಿತಿ ಚಿಂತಾಜನಕ ಆಗಿದೆ. ಅವರ ಮೇಲೆ ನಾನೊಂದು ಕಾದಂಬರಿ 'ಕೊಟ್ಟ' ಎಂದು ಬರೆದಿದ್ದೇನೆ.' ಒಂದು ರೀತಿಯಲ್ಲಿ ಕೊರಗ, ಜೇನು ಕುರುಬ ಮತ್ತು ಕಾಡು ಕುರುಬರು ಹೀನಾಯ ಸ್ಥಿತಿಯಲ್ಲಿದ್ದಾರೆ. ಇನ್ನು ಕೂಡ ಅವರನ್ನು ಮೇಲಕ್ಕೆ ಎತ್ತಲು ಅಸಾಧ್ಯವಾಗಿದೆ. ಆದ್ದರಿಂದ ಕೊಡಗರಿಗೆ ಮತ್ತು ಇವರಿಗೆ ನಾವು ಸಮಗ್ರವಾಗಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಗೆ ಸರ್ಕಾರದಲ್ಲಿ ಒಂದು ಪ್ರತ್ಯೇಕ ಯೋಜನೆ ಸಿದ್ಧಮಾಡುತ್ತಿದ್ದೇವೆ. ೧೯೪೪-೯೫ಕ್ಕೆ ಅದನ್ನು ಅನುಷ್ಠಾನ ಮಾಡುತ್ತೇವೆ.

ಛೇರ್ಮನ್.—ಈಗ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾವನೆ ಮಂಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ೩೧ನೇ ಮಾರ್ಚ್ ೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧ ರಿಂದ ೬೨ರ ವರೆಗೆ ಸಂಬಂಧಿಸಿದ ಮೊಬಲಗು ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನುದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ವಿಾರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಸೂಚಿಸುತ್ತೇನೆ.

ಛೇರ್ಮನ್.—ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.
ಪ್ರಸ್ತಾವ ಏನೆಂದರೆ :

'ದಿನಾಂಕ ೩೧-೩-೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧ ರಿಂದ ೬೨ರ ವರೆಗೆ ಸಂಬಂಧಿಸಿದ ಮೊಬಲಗು ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನುದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ವಿಾರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಸೂಚಿಸುತ್ತದೆ.'

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಧನ ವಿನಿಯೋಗ ಮಸೂದೆ ವಿಧೇಯಕ ೯೪

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ೧೯೯೪-೯೫ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಲೇಖಾನುದಾನ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

ಛೇರ್ಮನ್.—ಪ್ರಸ್ತಾಪ ಏನೆಂದರೆ : ''೧೯೯೪-೯೫ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಲೇಖಾನುದಾನ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಅನುಮತಿ ನೀಡಲಾಯಿತು

(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

(೧) ೧೯೯೪ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ ೨) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೯೪ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೯೪ರ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨)ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೯೪ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ

ಅನುಬಂಧ-I

ಕರ್ನಾಟಕ ಧನ ವಿನಿಯೋಗ (ನಂ.೨) ವಿಧೇಯಕ ೧೯೯೪.

(ವಿಧಾನಸಭೆ ವಿಧೇಯಕ ೧೯೯೩ರ ಸಂಖ್ಯೆ ೧೩)

೧೯೯೩-೯೪ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

೧೯೯೩-೯೪ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ.

ಇದು ಭಾರತ ಗಣರಾಜ್ಯದ ನಲವತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

೧. ಸಂಕ್ಷಿಪ್ತ ಹೆಸರು.—ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ.೨) ಅಧಿನಿಯಮ ೧೯೯೪ ಎಂದು ಕರೆಯತಕ್ಕದ್ದು.

೨. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ೧೯೯೩-೯೪ನೇ ಹಣಕಾಸು ವರ್ಷಕ್ಕಾಗಿ ೧೨೫೫,೯೬,೫೧,೦೦೦ ರೂಪಾಯಿಗಳ ನೀಡಿಕೆ.—ಅನುಸೂಚಿಯ ೨ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಾಧದಲ್ಲಿ, ೧೯೯೩-೯೪ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ ೩ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮೊತ್ತದಲ್ಲಿ ಒಂದು ಸಾವಿರದ ಇನ್ನೂರ ಮೂವತ್ಮೂರು ಕೋಟಿ ತೊಂಬತ್ಮೂರು ಲಕ್ಷದ ಐವತ್ತೊಂದು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

೩. ಧನವಿನಿಯೋಗ.—ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪೂರೈಸಲ್ಪಡತಕ್ಕದ್ದು	ಸಂಚಿತ ನಿಧಿಯಿಂದ ಪೂರೈಸಲ್ಪಡತಕ್ಕದ್ದು	
1	2		3	4	5
1	ವ್ಯವಸಾಯ (ಕರ್ನಾಟಕ ಅಗ್ರೋ ಇಂಡಸ್ಟ್ರೀಸ್ ನಿಗಮ ಮೊರತುಪಡಿಸಿ)	ರಾಜಸ್ವ	5,00,01,000	...	5,00,01,000
2	ತೋಟಗಾರಿಕೆ	ರಾಜಸ್ವ	3,01,94,000	...	3,01,94,000
4	ಪಶುಸಂಗೋಪನೆ	ರಾಜಸ್ವ	...	531,000	531,000
5	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು				
	(ಜವಳಿ ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	7,01,29,000	...	7,01,29,000
7	ಚಿಕ್ಕ ಪುಟ್ಟ ಉದ್ಯಮಗಳು	ಬಂಡವಾಳ	3,00,00,000	...	3,00,00,000
9	ಜವಳಿ ಉದ್ಯಮಗಳು ಇತ್ಯಾದಿ	ಬಂಡವಾಳ	3,62,45,000	...	3,62,45,000

10	ಸಕ್ಕರೆ ಕೈಗಾರಿಕೆಗಳು	ಬಂಡವಾಳ	19,86,01,000	...	19,86,01,000
11	ಲೇಖನ ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	35,00,000	...	35,00,000
13	ಉಚ್ಚ ಶಿಕ್ಷಣ	ರಾಜಸ್ವ	14,40,32,000	...	14,40,32,000
15	ಕಲೆ ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	1,74,06,000	...	1,74,06,000
...	ಬಡ್ಡಿ ಸಂದಾಯ	ರಾಜಸ್ವ	...	59,95,00,000	59,95,00,000
...	ಆಂತರಿಕ ಋಣ ಕೇಂದ್ರ ಸರ್ಕಾರದಿಂದ ಸಾಲ ಮತ್ತು	ಬಂಡವಾಳ	...	975,00,00,000	975,00,00,000
	ಅಂತರ ರಾಜ್ಯ ತೀರಿಕೆ				
17	ವರಮಾನ ತೆರಿಗೆ, ವೃತ್ತಿಗಳು ವ್ಯಾಪಾರ ಮತ್ತು ಇತರ ಸೇವೆಗಳು	ರಾಜಸ್ವ	4,35,00,000	...	4,35,00,000
19	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	ರಾಜಸ್ವ	28,87,98,000	...	28,87,98,000
20	ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು	ರಾಜಸ್ವ	7,00,000	...	7,00,000
21	ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ ನಿಧಿ ಮತ್ತು ರಾಜ್ಯ ಲೆಕ್ಕ ಪತ್ರ	ರಾಜಸ್ವ	3,60,44,000	...	3,6,044,000
23	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	66,02,000	12,000	66,14,000
		ಬಂಡವಾಳ	66,00,000	...	66,00,000
25	ರಾಜ್ಯದ ಅಬಕಾರಿ	ರಾಜಸ್ವ	2,50,00,000	...	2,50,00,000
		ಬಂಡವಾಳ	2,00,00,000	...	2,00,00,000

1	2		3	4	5
26	ಸಾರಿಗೆ ಸೇವೆಗಳು	ಬಂಡವಾಳ	28,00,00,000	..	28,00,00,000
27	ಪೋಲೀಸು ಸೇವೆಗಳು	ರಾಜಸ್ವ	15 00,000	...	15,00,000
28	ಬ[illegible]ಾಸೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ	ರಾಜಸ್ವ	50,00,000	...	50,00,000
29	ವಾರ್ತಾ ಮತ್ತು ಪ್ರಚಾರ	ರಾಜಸ್ವ	3,81,00,000	75,000	3,81,75,000
30	ಪ್ರವಾಸೋದ್ಯಮ	ರಾಜಸ್ವ	25,00,000	...	25,00,000
31	ವೈದ್ಯಕೀಯ ಶಿಕ್ಷಣ	ರಾಜಸ್ವ	2,00,01,000	...	2,00,01,000
32	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	1,00,00,000	...	1,00,00,000
35	ಸಣ್ಣ ನೀರಾವರಿ	ರಾಜಸ್ವ	45,48,000	...	45,48,000
36	ಭಾರಿ ಮತ್ತು ಮಧ್ಯಮ ನೀರಾವರಿ	ರಾಜಸ್ವ	10,46,83,000	...	10,46,83,000
		ಬಂಡವಾಳ	1,000	...	1,000
37	ರಾಜ್ಯ ವಿಧಾನ ಮಂಡಲ	ರಾಜಸ್ವ	95,00,000	5,00,000	1,00,00,000
38	ನ್ಯಾಯ ಪರಿಪಾಲನೆ	ರಾಜಸ್ವ	21,60,000	...	21,60,000
39	ಚುನಾವಣೆಗಳು	ರಾಜಸ್ವ	25,00,000	...	25,00,000
40	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	...	10,00,000	10,00,000

41	ಸಚಿವಾಲಯ	ರಾಜಸ್ವ	1,16,00,000	...	1,16,00,000
43	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	1,56,45,000	42,70,000	1,99,15,000
46	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ	5,00,000	...	5,00,000
47	ಕಟ್ಟಡಗಳು	ಬಂಡವಾಳ	38,03,000	38,97,000	77,00,000
48	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ	12,00,00,000	...	12,00,00,000
50	ವಿದ್ಯುಚ್ಛಕ್ತಿ ಯೋಜನೆಗಳು	ಬಂಡವಾಳ	1000	...	1000
51	ಭೂ ಕಂದಾಯ ಇತ್ಯಾದಿ	ರಾಜಸ್ವ	5,98,000	...	5,98,000
53	ಮುದ್ರಣ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ	ರಾಜಸ್ವ	6,21,77,000	...	6,21,77,000
54	ಪಕ್ಕೆ	ರಾಜಸ್ವ	1,00,00,000	...	1,00,00,000
55	ಸಹಕಾರ	ರಾಜಸ್ವ	2,68,000	48,000	3,16,000
		ಬಂಡವಾಳ	84,69,000	...	84,69,000
58	ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ	ರಾಜಸ್ವ	25,49,62,000	...	25,49,62,000
59	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	39,50,000	...	39,50,000
	ಜುಮ್ಲಾ	ರಾಜಸ್ವ	120,59,69,000	60,59,36,000	181,19,05,000
		ಬಂಡವಾಳ	77,38,49,000	975,38,97,000	1052,77,16,000
	ಒಟ್ಟು ಜುಮ್ಲಾ		197,98,18,000	1005,98,33,000	1233,96,51,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

೧೯೯೪-೯೫ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ ೨೦೫ನೇ (೧) (ಎ) ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯ ಮಂತ್ರಿಗಳು.

ನಿಂ. ಹು. ಮುತ್ತಲಗೇರಿ,
ಕಾರ್ಯದರ್ಶಿ.

(೨) ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ (ತೆರಿಗೆ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ (ತೆರಿಗೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವೇನೆಂದರೆ, ''೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ

ಅನುಬಂಧ-II

ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೯೪.

(೧೯೯೪ರ ವಿಧಾನ ಸಭಾ ವಿಧೇಯಕ ಸಂಖ್ಯೆ ೧೧)

ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವು, ೧೯೫೯ನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕ.

ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವು, ೧೯೫೯ (೧೯೫೯ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೭) ನ್ನು ಇನ್ನಷ್ಟು ಮುಂದೆ ತಿಳಿಸಲಾದ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;